ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

5ನೇ ವರ್ಷ 28ನೇ ಸಂಚಿಕೆ ಕೊಪ್ಪ 29-3-1987 ಭಾನುವಾರ ಬೆಲೆ 50 ಪೈಸೆ

ಶೃಂಗೇರಿ ತಾ. ವ್ಯ. ಮಾ. ಸ. ಸಂಘದ ವಾರ್ಷಿಕ ಮಹಾಸಭೆ:

ಸದಸ್ಯರ ಆಕ್ರೋಶ, ತಪ್ಪಿದ ಕೈ-ಕೈ

(ವರದಿ : ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಹಲವು ವರ್ಷಗಳಿಂದ ಸತತವಾಗಿ ನಷ್ಟವನ್ನೇ ಅನುಭವಿಸುತ್ತಿರುವ ಇಲ್ಲಿನ ತಾ|| ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಈಚೆಗೆ ನಡೆದಾಗ, ಸಂಘದ (ಅ)ವ್ಯವಹಾರಗಳ ಬಗ್ಗೆ ಸದಸ್ಯರ ಭುಗಿಲೆದ್ದ ಆಕ್ರೋಶದಿಂದಾಗಿ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಕೆಲ ಸದಸ್ಯರ ನಡುವೆ ಕೈ-ಕೈ ಮಿಲಾಯಿಸುವ ಮಟ್ಟಕ್ಕೆ ಹೋಗಿ, ಕಚ್ಚೋಡಿ ಶ್ರೀನಿವಾಸ್ ಅವರ ಮಧ್ಯಪ್ರವೇಶದಿಂದ ಸ್ವಲ್ಪದರಲ್ಲಿ ತಪ್ಪಿತು.

ಕಳೆದ ವರ್ಷ ಸೇಲ್ಸ್‌ಮನ್‌ಗಳ ಸ್ಥಳ ಬದಲಾವಣೆ ಮಾಡಿದಂದಿನಿಂದ ನೌಕರ ವರ್ಗದೊಳಗೆ ಎರಡು ಗುಂಪಾಗಿ, ಒಂದು ಗುಂಪಿನವರಿಂದ ಸೊಸೈಟಿಯ ನಿಜವಾದ ಆಗುಹೋಗುಗಳ ವಿವರಗಳು ಸದಸ್ಯರಿಗೆ ದೊರಕಲು ಕಾರಣವಾಯಿತು ಹೀಗೆ ಪೂರ್ವನಿಯೋಜಿತ ಎನ್ನಬಹುದಾದ ಈ ಗಲಾಟೆ ವಿಕೋಪಕ್ಕೆ ಹೋದಲ್ಲಿ ಅಧ್ಯಕ್ಷ, ಕಾರ್ಯದರ್ಶಿಗಳು ಹೊಡೆದಾಟಕ್ಕೂ ಇಳಿಯಬಹುದೆಂದು ನಿರೀಕ್ಷಿಸಿ ಒಂದು ಗುಂಪು ಅದಕ್ಕೂ ಸಿದ್ಧವಾಗಿ ಬಂದಂತೆ ಕಾಣುತ್ತಿತ್ತು.

82ರಲ್ಲಿ ಲೆವಿ ಭತ್ತ ಸಂಗ್ರಹಕ್ಕಾಗಿ 5 ರೂ. ನಂತೆ ಕೊಂಡ 2800 ಚೀಲಗಳಿಗೆ ಈಗ 8 ರೂ. ಗಳಂತೆ ಬೆಲೆ ತೋರಿಸಿ 'ಆಸ್ತಿ'ಯಲ್ಲಿ ತೋರಿಸಿದ್ದು ನಷ್ಟದ ಲೆಕ್ಕ ಕಮ್ಮಿ ತೋರಿಸಲು ನಡೆಸಿದ ಹುನ್ನಾರ ಎಂಬುದು ಒಂದು ಆರೋಪ.

ಅತಿ ಮುಖ್ಯ ವಿಚಾರ ದುಬಾರಿ ಸಾಗಣೆ ವೆಚ್ಚದ್ದು. ಕಿ.ಮೀ.ಗೆ 3 ರೂ.ಗೆ ಬೇರೆಯವರು ತಯಾರಿರುವಾಗ ಹಾಗೂ ಸರ್ಕಾರ 4 ಕಿ.ಮೀ.ಗೆ 13 ರೂ. 60 ಪೈಸೆ ನಿಗದಿ ಮಾಡಿರುವಾಗ ಕಿ. ಮೀ.ಗೆ 8 ರೂ.ನಂತೆ ಕೊಟ್ಟು ಈ ಬಾಬಿನಿಂದ 1,28,865 ರೂ. ನಷ್ಟಕ್ಕೆ ಕಾರಣರಾದ ಕಾರ್ಯದರ್ಶಿಯಿಂದ ಹೆಚ್ಚುವರಿ ಪಾವತಿಯ ಹಣ ವಸೂಲು ಮಾಡಬೇಕು ಎಂಬ ಒತ್ತಾಯ.

ಹಾಗೆಯೇ ಬೇಲಿಯ ತಂತಿಯನ್ನು 10-75ಕ್ಕೆ ಶೃಂಗೇರಿಗೆ ತಂದು ಪೂರೈಸಲು ಜಯಪುರ, ಚಿಕ್ಕಮಗಳೂರಿನವರು ಸಿದ್ಧರಿರುವಾಗ, 11-50 ಕೊಟ್ಟಿರುವುದು ಹಣ ನುಂಗುವುದಕ್ಕೇ ಎಂಬ ಆರೋಪ.

ಇವಲ್ಲದೆ ಇನ್ನೂ ಹಲವು ಆರೋಪಗಳನ್ನು ಸದಸ್ಯರು ಮಾಡಿದರು. ಈ ವಿಚಾರಗಳ ಪ್ರಸ್ತಾಪ ಬಂದಾಗ ಮತ್ತು ಈ ಆರೋಪಗಳು ಚರ್ಚಿತವಾಗುವಾಗ ಅಧ್ಯಕ್ಷ ಸುರೇಂದ್ರ ಮತ್ತು ಕಾರ್ಯದರ್ಶಿ ಶಂಕರಪ್ಪ ಮತ್ತು ಕೆಲವು ಸದಸ್ಯರು ಪರಸ್ಪರ ದೋಷಾರೋಪಣೆ ಮಾಡಿಕೊಂಡು ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಮಧ್ಯೆ ಪ್ರವೇಶಿಸಿದ ಕಚ್ಚೋಡಿ ಶ್ರೀನಿವಾಸ್, ಹಲವಾರು ಜನ ಕಾರ್ಯದರ್ಶಿಗಳು ಹಣ ದುರುಪಯೋಗ ಮಾಡಿರುವುದರಿಂದ ಈ ಸೊಸೈಟಿ ಸದಸ್ಯರ ನಂಬಿಕೆ ಕಳೆದುಕೊಂಡಿದೆ. ಇನ್ನಾದರೂ ಹಾಗಾಗದಂತೆ ನೋಡಿಕೊಳ್ಳಿ ಎಂದು ಹಿತವಚನ ಹೇಳಿದರು.

ಆಸ್ತಿಯೆಂದು ನಮೂದಾಗಿದ್ದರೂ ಹಾಲಿ ಸೊಸೈಟಿಯಲ್ಲಿ ಇಲ್ಲದೆ ಮಾರಾಟವಾಗಿವೆಯೆನ್ನಲಾಗಿರುವ ಚೀಲಗಳನ್ನು ಕೂಡಲೇ ತರಿಸಿ, ಹರಾಜು ಹಾಕಿ ಹಣವನ್ನು ಜಮಾ ಮಾಡಬೇಕು ಹಾಗೂ ಸಾಗಣೆ ಬಗ್ಗೆ ಇನ್ನು ಮುಂದೆ ಟೆಂಡರ್ ಕರೆಯಬೇಕೆಂದು ನಿರ್ಣಯ ಮಾಡಲಾಯಿತು.

ಕೊನೆಯಲ್ಲಿ ಕಾರ್ಯದರ್ಶಿ ಶಂಕರಪ್ಪ ಗೌಡ, ವಂದನಾರ್ಪಣೆ ಮಾಡುತ್ತ, "ಎಲ್ಲಾ ನಷ್ಟಕ್ಕೆ ನಾನೇ ಕಾರಣನಲ್ಲ. ನಾನು ಬರುವಾಗಲೇ 48 ಸಾವಿರ ನಷ್ಟ ಇತ್ತು. ಆ ಪ್ರಮಾಣದಲ್ಲೇ ನಡೆಸಿಕೊಂಡು ಬಂದಿದ್ದೇನೆ. ಮುಂದಿನ ವರ್ಷ ಖಾತ್ರಿಯಾಗಿ ಲಾಭ ಮಾಡಿಕೊಟ್ಟೇ ಸೊಸೈಟಿ ಬಿಡುತ್ತೇನೆ" ಎಂದು ಘೋಷಿಸಿಕೊಂಡರು.

ಅಡಿಕೆ ಧಾರಣೆ

ಸಾಗರ ಅಡಿಕೆ ತಾ|| 26.3.87

ಇಡಿ ಅಡಿಕೆ ರೂ. 1679-1816

ಅಪಿ ರೂ. 3059-3532

ಚಾಲಿ 1220-1422

ಸಿಪ್ಪೆ ಗೋಟು ರೂ. 409-710

ಮೆಣಸು ರೂ. 4959-5396

ಮಾಮ್ಕೋಸ್‌ನ ಶೃಂಗೇರಿ, ಕೊಪ್ಪ, ತೀರ್ಥಹಳ್ಳಿ ಶಾಖೆಗಳಲ್ಲಿ 5-4-87ರಂದು ಈ ಸುಗ್ಗಿಯ ಕೊನೇ ವ್ಯಾಪಾರ ನಡೆಯುತ್ತದೆ

ಮಂಡಲ ಪಂಚಾಯ್ತಿ ನಾಮಕರಣಕ್ಕೆ ವಿರೋಧ

ಹೊನಗಾರು: ಚಾವಲ್ಮನೆ ಮಂಡಲ ಪಂಚಾಯ್ತಿ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಮಾ 15 ರಂದು ಇಲ್ಲಿ ನಡೆದ ಅಭಿನಂದನಾ ಸಭೆಯಲ್ಲಿ ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ಮುಖಂಡ ಯು. ಕೆ. ಶಾಮಣ್ಣ ಮಾತನಾಡಿ, ಚುನಾಯಿತ ಸದಸ್ಯರುಗಳು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕ ಸೇವೆ ಸಲ್ಲಿಸಲು ಕರೆ ನೀಡಿದರು. ಹಾಗೂ ಮಂಡಲ ಪಂಚಾಯ್ತಿಗಳಿಗೆ ಸರ್ಕಾರ ಪಕ್ಷದವರನ್ನು ನಾಮಕರಣ ಮಾಡುವುದನ್ನು ವಿರೋಧಿಸಿದರು.

ಜಿ.ಪ. ಸದಸ್ಯೆ ಎಚ್. ಎಸ್. ಸುಮಿತ್ರ, ಮತ್ತು ಮಂಡಲ ಪಂಚಾಯ್ತಿ ಸದಸ್ಯ ಯು.ಎಸ್. ಶಿವಪ್ಪ (ಅವಿರೋಧ ಆಯ್ಕೆ) ತಮ್ಮನ್ನು ಚುನಾಯಿಸಿದ್ದಕ್ಕೆ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಶ್ರೀನಿವಾಸನಾಯ್ಕ ಅಧ್ಯಕ್ಷತೆ ವಹಿಸಿದ್ದು, ಎಂ.ಸಿ. ವೆಂಕಟಯ್ಯ ಮಾತನಾಡಿದರು. ಕೆ.ಜಿ. ಧರ್ಮಯ್ಯ ಸ್ವಾಗತಿಸಿ, ಕೆ.ಎಸ್. ಹಾಲಪ್ಪ ವಂದಿಸಿದರು.

ಶಟಲ್ ಟೂರ್ನಿ

ಅಂತಿಮ ಫಲಿತಾಂಶ

ಕೊಪ್ಪ: ಇಲ್ಲಿ ಮಾ. 25ರಿಂದ 3 ದಿನ ನಡೆದ ಕೊಪ್ಪ ಟೌನ್ ಮಟ್ಟದ ಶಟಲ್ ಬ್ಯಾಡ್ಮಿಂಟನ್ ಕೂಟದ ಅಂತಿಮ ಫಲಿತಾಂಶ ಈ ರೀತಿ ಇದೆ:

ಪುರುಷರು: ಜಾಕೂಬ್ ಮತ್ತು ಜಾಕೂಬ್ ಜಾನ್-ಪ್ರಥಮ; ಶೌಕತ್ ಅಲಿ ಮತ್ತು ಜಹೀರ್ ಅಬ್ಬಾಸ್ – ದ್ವಿತೀಯ; ಮಹಿಳೆಯರು: ಆಶಾ ಬೋಪಯ್ಯ ಮತ್ತು ವಿನೋದಾ ಶೆಟ್ಟಿ-1; ಮೀರಾ ಸುರೇಶ್ ಮತ್ತು ಹೇಮಲತಾ-2; ಮಿಕ್ಸೆಡ್ ಡ[illegible]ಬಲ್ಸ್: ವಾಸುದೇವ ನವಿಲೇಕರ್ ಮತ್ತು ಕೆ.ಪಿ. ಭಾರತಿ-1; ಸಿ. ಸುಂದರ್ ಮತ್ತು ದಿಂಪಲ್ ಅಜಿಲ-2.

ಶೃಂಗೇರಿ. ತಾ. ವ್ಯ ಮಾ. ಸ. ಸಂಘದ

ನೂತನ ಮಾರಾಟ ಮಳಿಗೆ ಉದ್ಘಾಟನೆ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: 1 ಲಕ್ಷ 88 ಸಾವಿರ ರೂ. ವೆಚ್ಚದಲ್ಲಿ ನಿರ್ಮಿಸಿರುವ ಇಲ್ಲಿನ ತಾ ವ್ಯ. ಮಾ. ಸ. ಸಂಘದ ಮಾರಾಟ ಮಳಿಗೆ ಮತ್ತು ಕಾರ್ಯಾಲಯ ಸಭಾಂಗಣದ ನೂತನ ಕಟ್ಟಡಗಳನ್ನು ಎಚ್. ಜಿ. ಗೋವಿಂದ ಗೌಡ ಮತ್ತು ಜಿ. ಪ. ಅಧ್ಯಕ್ಷ ಕೆ. ಎಂ. ಕೃಷ್ಣಮೂರ್ತಿ ಉದ್ಘಾಟಿಸಿದರು.

1 ವರ್ಷದ ಹಿಂದೆ ಶಂಕುಸ್ಥಾಪನೆಯಾಗಿದ್ದ ಈ ಕಟ್ಟಡವನ್ನು ಇಷ್ಟು ಶೀಘ್ರವಾಗಿ ಕಟ್ಟಿ ಮುಗಿಸಿದವರನ್ನು ಅಭಿನಂದಿಸಿದ ಗೋವಿಂದ ಗೌಡರು, ಜಿಲ್ಲಾ ಶತಾಬ್ದಿ ಅಂಗವಾಗಿ ನಿರ್ಮಿಸಲು 3 ತಿಂಗಳ ಹಿಂದೆ ತಾವೇ ಶಂಕುಸ್ಥಾಪನೆ ಮಾಡಿದ್ದ ರಂಗಮಂದಿರದ ಬಗ್ಗೆ ಇನ್ನೂ ಏನೂ ಕೆಲಸ ಆಗದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ರೇಗಿ ಬಿದ್ದರು

ನನ್ನ ಕ್ಷೇತ್ರದಲ್ಲಿ ಇದೊಂದು ಹಾಗೂ ನ ರಾ. ಪುರದಲ್ಲಿ ದೇವೇಗೌಡರು ಅಡಿಗಲ್ಲು ಹಾಕಿದ್ದ ಒಂದು-ಈ ಎರಡು ಕೆಲಸಗಳು ಮಾತ್ರ ಈ ಸ್ಥಿತಿಯಲ್ಲಿವೆ. ಇದನ್ನು ನಾನು ಸಹಿಸುವುದಿಲ್ಲ" ಎಂದು ಅವರು ಎಚ್ಚರಿಸಿದರು.

(ರಂಗಮಂದಿರದ ಕಟ್ಟಡಕ್ಕೆ ಸರ್ಕಾರದ ಹಣವಲ್ಲದೆ ಸ್ಥಳೀಯರು ಒಂದು ಲಕ್ಷ ರೂ. ಕೂಡಿಸಬೇಕಂತೆ. ಆದರೆ ಇಲ್ಲಿ ಯಾರೂ ಈ ಸಂಗ್ರಹ ಕಾರ್ಯಕ್ಕೆ ಕೈ ಹಾಕಿಲ್ಲವೆನ್ನಲಾಗಿದೆ. ಪುರಸಭೆಯವರು 1 ಲಕ್ಷ ರೂ. ಬೆಲೆ ಬಾಳುವ ನಿವೇಶನ ನೀಡಿರುವುದರಿಂದ ಹಣ ಸಂಗ್ರಹಕ್ಕೆ ಮುಂದಾಗಲಿಲ್ಲ ಎನ್ನಲಾಗಿದೆ.)

ಬೆತ್ತಲೆ ಸೇವೆ ಮತ್ತು ಅದರ ನಿಷೇಧ —

ದಲಿತ ಸಂಘರ್ಷ ಸಮಿತಿ, ವಿಶ್ವ ಹಿಂದು ಪರಿಷತ್‌ಗಳ ಪಾತ್ರದ ವಿವೇಚನೆ

ಚಂದ್ರಗುತ್ತಿಯ ಬೆತ್ತಲೆ ಸೇವೆಯನ್ನೂ ಜಾತ್ರೆಯನ್ನೂ ಈ ವರ್ಷ ರದ್ದುಪಡಿಸಿದ ರಾಜ್ಯ ಸರ್ಕಾರದ ನಿರ್ಧಾರ ಬಹಳ ಒತ್ತಡಗಳ ಎದುರು ಬಹು ಕಷ್ಟದಿಂದಲೇ ಇರಿಸಿದ, ಆದರೆ ದಿಟ್ಟವಾದ ಹೆಜ್ಜೆ ಎಂಬುದರಲ್ಲಿ ಸಂದೇಹವಿಲ್ಲ. ಈ 'ದಿಟ್ಟತನ'ವನ್ನು ಹೋದ ವರ್ಷವೇ ತೋರಬಹುದಿತ್ತು–ಎನ್ನಬಹುದು. ಆದರೆ ಈಗಿನ ನಮ್ಮ ಸರ್ಕಾರಗಳಿಗೆಲ್ಲ ಅಂಥ ಗುಂಡಿಗೆ ಇದೆ ಎನ್ನಿಸುವುದಿಲ್ಲ. ಹಾಗೆ ಮಾಡಬೇಕಾದರೆ ಬಹುಶಃ ದೇವರಾಜ ಅರಸುರಂಥವರ ಗುಂಡಿಗೆ ಬೇಕಾಗುತ್ತೇನೋ. ಏಕೆಂದರೆ, ಇಡೀ ಜಾತ್ರೆಯನ್ನೇ ನಿಷೇಧಿಸದೆ ಬರಿ ಬೆತ್ತಲೆ ಸೇವೆ ನಿಷೇಧಿಸುವ ಆಜ್ಞೆ ಹೊರಡಿಸಿದ್ದರೆ, ಒಂದೋ ಅದು ಪರಿಣಾಮಕಾರಿಯಾಗುತ್ತಿರಲಿಲ್ಲ, ವ್ಯಾಪಕವಾಗಿ ಬೆತ್ತಲೆ ಸೇವೆ ನಡೆದೇ ನಡೆಯುತ್ತಿತ್ತು; ಅಥವಾ ಜಾತ್ರೆಯ ಲಕ್ಷ ಸಂಖ್ಯೆಯಲ್ಲಿ ಕಳೆದ ವರ್ಷ ನಡೆದಂಥ ದೊಂಬಿ ಆಗಿಯೋ ಆಗುತ್ತಿತ್ತು–ಬಹುಶಃ ಇನ್ನೊಂದಿಷ್ಟು ಲಾಠಿ, ಅಶ್ರುವಾಯು, ಗೋಲಿಬಾರ್ ಎಲ್ಲ ಆಗಿ ಒಂದಷ್ಟು ಪ್ರಾಣಹಾನಿಯೂ ಆಗುತ್ತಿತ್ತು.

ಹಾಗೆಂದು ಹೋದ ವರ್ಷವೇ ಇಡೀ ಜಾತ್ರೆಯನ್ನೇ ನಿಷೇಧಿಸಿದ್ದರೆ ಅದರ ವಿರುದ್ಧ ಕೂಡ ಮೂಢನಂಬಿಕೆ ಪ್ರತಿಪಾದಕರಾದ ಮತಾಂಧ ಶಕ್ತಿಗಳು ದೊಡ್ಡ ಗಲಭೆಯನ್ನೇ ಹುಟ್ಟು ಹಾಕುತ್ತಿದ್ದರು. ಈ ವರ್ಷವೇ ಎಷ್ಟು ದೊಡ್ಡ ಬಾಯಿ ಮಾಡಿದರಲ್ಲ!

ಆದರೆ ಈ ವರ್ಷ ಇಂಥ ನಿರ್ಧಾರ ತೆಗೆದುಕೊಳ್ಳುವುದು ಸ್ವಲ್ಪ ಸುಲಭದ್ದೇ ಆಯಿತು. ಏಕೆಂದರೆ ಹೋದ ವರ್ಷದ ಘಟನಾವಳಿಯ ಹಿನ್ನೆಲೆ ಇದಕ್ಕೆ ಬಹಳ ಬಲವಾದ ಸಮರ್ಥನೆಯನ್ನು ಒದಗಿಸಿದ್ದು ಒಂದು ಕಡೆಯಾದರೆ ಚನ್ನವೀರಪ್ಪ ಆಯೋಗದ ವರದಿ ಕೂಡ ಈ ಬಗ್ಗೆ ಶಿಫಾರ್ಸು ಮಾಡಿತ್ತು.

ಅಂತೂ ತಡವಾಗಿಯಾದರೂ ಸರಿ, ಇಡೀ ದೇಶಕ್ಕೇ ಅಪಮಾನಕಾರಿಯಾಗಿದ್ದ ಇಂಥದೊಂದು ಹೀನ ಸಂಪ್ರದಾಯಕ್ಕೆ ತಡೆ ಬಿದ್ದುದೊಂದು ಸಮಾಧಾನದ ಸಂಗತಿ. ಆದರೆ ಇದು ಇಷ್ಟಕ್ಕೇ ನಿಲ್ಲುತ್ತೆನ್ನುವಂತಿಲ್ಲ. ಇನ್ನೂ ಕಡೇ ಪಕ್ಷ ಮೂರ್ನಾಲ್ಕು ವರ್ಷವಾದರೂ ಬಹಳ ಕಟ್ಟುನಿಟ್ಟಿನಿಂದ ಈ ಕಾರ್ಯಕ್ರಮವನ್ನು ನಿಲ್ಲಿಸಬೇಕಾಗುತ್ತದೆ–ಬಹುಶಃ ಜಾತ್ರೆಯನ್ನೇ ಕೆಲವು ವರ್ಷ ನಿಷೇಧಿಸಬೇಕಾಗಲೂಬಹುದು. ಕಳೆದ ವರ್ಷ ಅಷ್ಟೆಲ್ಲ ಕಷ್ಟದಿಂದ ನಿಲ್ಲಿಸಿದ್ದ ಬಳ್ಳಾರಿ ಜಿಲ್ಲೆಯ 'ಓಕುಳಿ'ಯನ್ನು ಈ ವರ್ಷ ಪುನಃ ಆರಂಭಿಸಲು ಹಲವರು ಯತ್ನಿಸುತ್ತಿರುವ ಬಗ್ಗೆ ಅಲ್ಲಿನ ಎಸ್ಪಿಯವರ ಎಚ್ಚರಿಕೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆಯಲ್ಲ. ಹಾಗೆ.

ಈ ಲೇಖನದ ಜೊತೆಗೆ ಬೇರೆ ಕೆಲವು ಪತ್ರಿಕೆಗಳಿಂದ ಆಯ್ದ ಕೆಲವು ವಿಚಾರಗಳನ್ನೂ, ಬೆತ್ತಲೆ ಸೇವೆ ನಿಷೇಧಕ್ಕಿಂತ ಮುಂಚೆ ದಲಿತ ಸಂಘರ್ಷ ಸಮಿತಿ ಹೊರಡಿಸಿದ್ದ ಕರಪತ್ರವನ್ನೂ ಮರು ಪ್ರಕಟಿಸಿದೆ. ಇದೆಲ್ಲದರ ಉದ್ದೇಶವೆಂದರೆ, ಕಳೆದ ವರ್ಷದ ರಾದ್ಧಾಂತಗಳಿಗೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳ ಕರ್ತವ್ಯ ಲೋಪವೇ ಕಾರಣ ಎಂದು ತೀರ್ಪು ನೀಡಿರುವ ಜೆ. ಚೆನ್ನವೀರಪ್ಪ ಆಯೋಗ, ವಿಶ್ವ ಹಿಂದು ಪರಿಷತ್ತನ್ನು ನಿರ್ದೋಷಿಯೆಂದು ಸಾರಿ, ದಲಿತ ಸಂಘರ್ಷ ಸಮಿತಿಯ ಮೇಲೆ "ಬೆತ್ತಲೆ ಸೇವೆ ತಡೆಯಲು ಬಲಾತ್ಕಾರ ಮಾಡಿದ್ದೂ ಹಿಂಸೆಗೆ ಕಾರಣ" ಎಂಬ ಆಪಾದನೆಯನ್ನು ಹೊರಿಸಿರುವುದನ್ನು ಹಾಗೂ ವಿಶ್ವ ಹಿಂದು ಪರಿಷತ್ ಬೆಂಬಲಿಗರ ಪಾತ್ರವನ್ನು ಸ್ವಲ್ಪ ವಿವೇಚನೆಗೆ ಒಡ್ಡುವುದಾಗಿದೆ.

"....ಇದರಲ್ಲಿ ವಿಶ್ವಹಿಂದೂ ಪರಿಷತ್ತಿನ ಕೈವಾಡ ಇತ್ತು ಎಂದು ಹೇಳಲು ಸಾಧ್ಯವಿಲ್ಲ. ಆದರೆ ಕೆಲವು ದುಷ್ಕರ್ಮಿಗಳು ಮತ್ತು ಸಮಾಜ ಘಾತುಕರು ಪರಿಸ್ಥಿತಿಯ ದುರ್ಲಾಭ ಪಡೆದು ವ್ಯಾಪಕ ಗಲಾಟೆಗೆ ಕಾರಣರಾಗಿದ್ದಾರೆ. ಇದು ಪೂರ್ವಯೋಜಿತವಲ್ಲ...." ಮುಂತಾಗಿ ಹೇಳಿರುವ ಆಯೋಗವು, "....ದಲಿತ ಸಂಘರ್ಷ ಸಮಿತಿ ಮತ್ತು ವಿಚಾರ ವೇದಿಕೆಗಳ ಸದಸ್ಯರು ಬೆತ್ತಲೆ ಸೇವೆಗೆ ಹೋಗುವವರನ್ನು ಬಲವಂತದಿಂದ ತಡೆದು ನಿಲ್ಲಿಸಿದ್ದು ಪೋಲೀಸರನ್ನು ಮತ್ತು ಈ ಸ್ವಯಂ ಸೇವಕರನ್ನು ಬೆತ್ತಲೆಗೊಳಿಸಲು ಪ್ರಚೋದಿಸಿತು...." ಎಂದು ಅಭಿಪ್ರಾಯಿಸಿದೆ.

ವಾಸ್ತವವಾಗಿ, ಬೆತ್ತಲೆ ಸೇವೆ ತಡೆಯಲೆತ್ನಿಸಿದವರಲ್ಲಿ ಸಾಕಷ್ಟು ಮಂದಿ ಮಹಿಳಾ ಕಾರ್ಯಕರ್ತೆಯರು ಇದ್ದರು. ದ.ಸಂ.ಸ. ಮತ್ತಿತರ ಸಂಘಟನೆಗಳ ಪುರುಷ ಕಾರ್ಯಕರ್ತರು ಬೆತ್ತಲೆ ಹೊರಡುವ ಪುರುಷರ ಬಳಿಯೇ ಇದ್ದು, ಬೆತ್ತಲೆ ಸ್ತ್ರೀಯರ ಬಳಿ ಮಹಿಳಾ ಕಾರ್ಯಕರ್ತೆಯರೇ ಇರುತ್ತಿದ್ದರು. ಇವರು ಯಾರು ಯಾರನ್ನೂ ಮೈ ಮುಟ್ಟಿ ಸಹ ಮಾತನಾಡಿಸುತ್ತಿರಲಿಲ್ಲ ಮೂರ್ನಾಲ್ಕು ಜನ ಸ್ವಯಂ ಸೇವಕರು ಕೈ ಕೈ ಹಿಡಿದು ಬೆತ್ತಲೆಯವರ ಸುತ್ತ 'ಕೋಟೆ' ಕಟ್ಟಿಕೊಂಡು ಅವರಿಗೆ ಬಟ್ಟೆ ಕೊಡುತ್ತ ಅದನ್ನು ಧರಿಸಲು ಮನ ಒಲಿಸುತ್ತಿದ್ದರು; ಯಾರೂ ಭಕ್ತರ ಜೊತೆ ಜಗಳವಾಡಲಿಲ್ಲ, ಅಶ್ಲೀಲವಾಗಿ ವರ್ತಿಸಲಿಲ್ಲ. ಇದು ನಿಜವಾಗಿ ಅಲ್ಲಿ ನಡೆದುದರ ಪ್ರತ್ಯಕ್ಷದರ್ಶಿ ವರದಿ.

ಹೀಗಾಗಿಯೇ, **ಈ ಕಾರ್ಯಕರ್ತರುಗಳ ಮೇಲೆ ಕುಡಿದು ಮತ್ತರಾಗಿದ್ದ ಜೋಗ–ಜೋಗತಿಯರು ಹಾಗೂ ಉನ್ಮತ್ತ ಪುಂಡರು ಹಲ್ಲೆ ನಡೆಸಿದ್ದು ಹೊರತು ಯಾವೊಬ್ಬ ನಿಜವಾದ ಮುಗ್ಧ ಭಕ್ತನೂ ಅಲ್ಲ. ಅಷ್ಟೇಕೆ, ಈ ಪುಂಡರಿಂದ ಇಂಥ ಹತ್ತಾರು ಮಂದಿ ಕಾರ್ಯಕರ್ತರನ್ನು ಇಂಥ ಭಕ್ತರೇ ತಮ್ಮ ಮಧ್ಯೆ ಅಡಗಿಸಿಟ್ಟುಕೊಂಡು ರಕ್ಷಣೆ ನೀಡಿದರು.**

(3ನೇ ಪುಟಕ್ಕೆ)

ಚಂದ್ರಗುತ್ತಿ ಜಾತ್ರೆ ರದ್ದುಪಡಿಸಲು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಹೊರಡಿಸಿದ್ದ ಕರಪತ್ರ

ಬೆತ್ತಲೆ ಸೇವೆ ನಿಲ್ಲಿಸಿ ಹೆಣ್ಣಿನ ಮಾನ ಉಳಿಸಿ

ಭಾರತವು ಸಂಸ್ಕೃತಿಯ ತವರು ಎಂದು ಮೊದಲಿನಿಂದಲೂ ಖ್ಯಾತಿ ಪಡೆದಿದೆ. ಇಡೀ **ವಿಶ್ವಕ್ಕೆ ಸಂಸ್ಕೃತಿಯ ಪಾಠವನ್ನು ಕಲಿಸಿದೆ.** ಆದ್ದರಿಂದಲೇ ಈ ದೇಶವನ್ನು ವಿಶ್ವ ಗುರು ಎಂದು ಪ್ರಾಚೀನರು ಕರೆದರು. **ನಮ್ಮಿಂದ ಸಂಸ್ಕೃತಿಯ ಪಾಠ ಕಲಿತ ವಿಶ್ವದ ಹಲವು ದೇಶಗಳು ತಮ್ಮ ಮೌಢ್ಯದ ಕೂಪದಿಂದ ಹೊರಬಂದು ಹೊಸ ನಾಗರಿಕತೆಯ ಬೆಳಕಿನತ್ತ ಮುನ್ನಡೆಯುತ್ತಿದ್ದರೆ. ನಾವು ಅದೇ ಮೌಢ್ಯದ ಕೂಪದತ್ತ ಹಿನ್ನಡೆಯುತ್ತಿದ್ದೇವೆ.** ಇದು ನಮ್ಮ ದೇಶದ ಒಂದು ದುರಂತ. ದೇವರು–ಧರ್ಮದ ಹೆಸರಿನಲ್ಲಿ ಅನೇಕ ರೀತಿಯ ಮೂಢನಂಬಿಕೆಗಳು ನೂರಾರು ವರ್ಷಗಳಿಂದ ನಮ್ಮ ಜನರನ್ನು ಕಿತ್ತು ತಿನ್ನುತ್ತಿವೆ. ಈ ಎಲ್ಲ ಮೌಢ್ಯಕ್ಕೆ, ದುರಂತಕ್ಕೆ ನಮ್ಮ ಪುರೋಹಿತಶಾಹಿಗಳೇ ಕಾರಣ ಎಂದು ಬೇರೆ ಹೇಳಬೇಕಾಗಿಲ್ಲ. ಬಡವರ ಅಜ್ಞಾನ, ಮೌಢ್ಯ ಹಾಗೂ ವಿಧೇಯತೆಯನ್ನು ದುರುಪಯೋಗಪಡಿಸಿಕೊಂಡು, ಅವರ ಬೆವರಿನಿಂದ ತಾವು ಸುಖಜೀವನ ನಡೆಸುತ್ತಾ, ತಮ್ಮ ಲೈಂಗಿಕ ತೃಷೆಗೆ ಅವರಲ್ಲಿ ಅನಾಗರಿಕವಾದ ಮೂಢ ಪದ್ಧತಿಗಳನ್ನು ತುರುಕಿ, ನಂಬಿಸಿ ಅದಕ್ಕೆ ತಕ್ಕಂತೆ ಕಥೆ ಹೆಣೆದು ಅದು ಅವರ ಮನದಾಳದಲ್ಲಿ ಬಲವಾಗಿ ಬೇರೂರುವಂತೆ ಮಾಡಿದರು. ಇಂತಹ ಪದ್ಧತಿಗಳಲ್ಲಿ ನಮ್ಮ ಕರ್ನಾಟಕದ ಮಟ್ಟಿಗೆ ಹೇಳಬೇಕಾದವುಗಳೆಂದರೆ 1) ಚಂದ್ರಗುತ್ತಿಯ ಬೆತ್ತಲೆ ಸೇವೆ 2) ಸವದತ್ತಿಯ ದೇವದಾಸಿ 3) ಬಳ್ಳಾರಿಯ ಓಕುಳಿ ಆಟ ಮುಂತಾದುವುಗಳು. ವಿಶೇಷವೆಂದರೆ ದೇವರ ಹೆಸರಿನಲ್ಲಿರುವ ಈ ಕ್ರೂರ ಪದ್ಧತಿಗಳಿಗೆ ಸ್ತ್ರೀಯರೇ ಬಲಿ ಪಶುಗಳು.

ಚಂದ್ರಗುತ್ತಿಯ ಗುತ್ಯಮ್ಮನ ಹೆಸರಿನಲ್ಲಿ ನಡೆಯುವ ಬೆತ್ತಲೆಸೇವೆಗೆ ನೂರಾರು ವರ್ಷಗಳ ಇತಿಹಾಸವಿದೆ. ಆದರೂ ಇದು ಬರ್ಬರ, ಪೈಶಾಚಿಕ ಕೃತ್ಯ; ಮೌಢ್ಯದ ಪರಮಾವಧಿ ಎಂಬುದು ಸತ್ಯ. **ಆದ್ದರಿಂದಲೇ ನೂರಾರು ವರ್ಷಗಳ ಹಿಂದೆ ದಾಸಶ್ರೇಷ್ಠರಾದ ಕನಕದಾಸರು ಕೂಡ ಈ ಬೆತ್ತಲೆ ಸೇವೆಯನ್ನು ಕಟುವಾಗಿ ಟೀಕಿಸಿದ್ದಾರೆ.** ಅಂದಮೇಲೆ ಆಧುನಿಕ ಯುಗದಲ್ಲಿ, 21ನೇ ಶತಮಾನಕ್ಕೆ ಕಾಲಿಡುತ್ತಿರುವ ದಿನಗಳಲ್ಲಿಯೂ ಇಂಥ ಮೂಢ ಪದ್ಧತಿ ಮುಂದುವರೆಯುತ್ತಿದೆ ಎಂದರೆ ನಾವೆಲ್ಲರೂ ತಲೆತಗ್ಗಿಸಬೇಕಾದ ವಿಷಯ. ಇದು ಭಾರತೀಯ ಸಂಸ್ಕೃತಿಗೆ, ಸ್ತ್ರೀ ಕುಲಕ್ಕೆ ಕಳಂಕ. ಇದನ್ನು ಮನಗಂಡೇ ದ. ಸಂ. ಸ.ವು ಈ ಪದ್ಧತಿಯನ್ನು ತೊಡೆದುಹಾಕಿ ಸ್ತ್ರೀ ಕುಲದ ಮಾನಹರಣವಾಗುವುದನ್ನು ತಡೆಗಟ್ಟುವ ದಿಸೆಯಲ್ಲಿ ಕಳೆದ ಮೂರು ವರ್ಷಗಳಿಂದ ಅನೇಕ ಕಾರ್ಯಕ್ರಮಗಳ ಮೂಲಕ ಜನ ಜಾಗೃತಿ ಮಾಡುತ್ತಿದೆ.

ಈ ಕಾರಣಕ್ಕಾಗಿಯೇ ದ. ಸಂ. ಸ.ವು ಕಳೆದ ಬಾರಿ (1986) ತನ್ನ ಕಾರ್ಯಕ್ರಮವನ್ನು ತೀವ್ರಗೊಳಿಸಿ ಜನರನ್ನು ತಲುಪುವ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಸಾಕಷ್ಟು ಯಶಸ್ಸು ಸಾಧಿಸಿತು. ಜಾತ್ರೆಯ ದಿನಗಳಲ್ಲಿಕೂಡ ಭಕ್ತಾದಿಗಳಿಗೆ ಕೈಮುಗಿದು ಪ್ರಾರ್ಥಿಸಿ ಮನ ಒಲಿಸುವ ಮೂಲಕ ಅವರು ಬಟ್ಟೆ ತೊಟ್ಟು ಪೂಜೆ ಸಲ್ಲಿಸುವಂತೆ ಮಾಡುವಲ್ಲಿ ಯಶಸ್ವಿಯಾಯಿತು. ಆದರೆ ನಮ್ಮ ಯಶಸ್ಸನ್ನು ಸಹಿಸದ ಕೆಲವು ಮತಾಂಧ ಶಕ್ತಿಗಳು, ಸಮಾಜ ದ್ರೋಹಿ ಶಕ್ತಿಗಳು ಉಂಟುಮಾಡಿದ ದುರ್ಘಟನೆ ಎಲ್ಲರಿಗೂ ತಿಳಿದದ್ದೇ. ಅದೀಗ ಇತಿಹಾಸಕ್ಕೆ ಸೇರಿಹೋಗಿದೆ. ಈ ಸಮಯದಲ್ಲಿ ನಡೆದ ಕ್ರೂರ ಹಲ್ಲೆಯಲ್ಲಿ **ನಮ್ಮನ್ನು ಹಲ್ಲೆಕೋರರಿಂದ ಕಾಪಾಡಿದವರು ಮುಗ್ಧ ಭಕ್ತರೇ.** ಮಾನವತೆಯುಳ್ಳ ಈ ಮುಗ್ಧ ಭಕ್ತರ ಬಗ್ಗೆ ದ.ಸಂ.ಸ. ಹೆಮ್ಮೆಪಡುತ್ತದೆ ಮತ್ತು ಅಂಥ ಸಾವಿರಾರು ಮಾನವಂತ ಹೃದಯಿಗಳಿಗೆ ದ. ಸಂ ಸ. ಸಹಸ್ರ ವಂದನೆಗಳನ್ನು ಅರ್ಪಿಸುತ್ತದೆ. ದ. ಸಂ. ಸ.ವು ಜನರ ಭಾವನೆಗಳನ್ನು ನೋಯಿಸಲು ನಿಜವಾದ ಧರ್ಮದ ಮೂಲವನ್ನು ಅಲುಗಾಡಿಸಲು ಎಂದೂ ಇಚ್ಛಿಸುವುದಿಲ್ಲ. **ಆದರೆ ಧರ್ಮ, ದೇವರ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ವಿರೋಧಿಸುತ್ತದೆ.**

ಈ ಬಾರಿಯೂ ಚಂದ್ರಗುತ್ತಿಯ ಜಾತ್ರೆ ಸಮೀಪಿಸುತ್ತಿದೆ. ತಾ|| 9–3–87ರಂದು ನಡೆಯಲಿದೆ. ಕಳೆದ ಬಾರಿಯ ದುರ್ಘಟನೆಯಿಂದ ನಾವ್ಯಾರೂ ಕಂಗೆಟ್ಟಿಲ್ಲ; ಹಿಂದೆ ಸರಿದಿಲ್ಲ. ನಮಗೆ ಗೊತ್ತು, ಸಹೃದಯ ಭಕ್ತರು ನಮ್ಮೊಡನೆ ಸಹಕರಿಸುತ್ತಾರೆ ಎಂದು. ಆದ್ದರಿಂದ ಈ ಬಾರಿಯೂ ಜಾತ್ರೆಗೆ ಸಂಬಂಧಿಸಿದಂತೆ ಪೂರ್ವಭಾವಿಯಾಗಿ ದ. ಸಂ. ಸ.ವು ಅನೇಕ ಕಾರ್ಯಕ್ರಮಗಳ ಮೂಲಕ ಜನರನ್ನು ತಲುಪಲು ಪ್ರಯತ್ನಿಸುತ್ತಿದೆ. ಸ್ತ್ರೀಕುಲಕ್ಕೆ ಮತ್ತು ನಾಗರಿಕ ಸಮಾಜಕ್ಕೆ ಸವಾಲಾಗಿರುವ ಈ ಹೀನ ಕೃತ್ಯ ನಿಲ್ಲಿಸಲು ದ ಸಂ. ಸ. ವು ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಇರುವ ಎಲ್ಲಾ ಪ್ರಗತಿಪರ ಸಂಘ ಸಂಸ್ಥೆಗಳನ್ನು, ಅದರಲ್ಲೂ ವಿಶೇಷವಾಗಿ ಮಹಿಳಾ ಸಂಘಟನೆಗಳನ್ನು, ನಾಗರಿಕರನ್ನು ಆಹ್ವಾನಿಸುತ್ತದೆ, ಮನವಿ ಮಾಡಿಕೊಳ್ಳುತ್ತದೆ. ಬನ್ನಿರಿ! ನಾವೆಲರೂ ಸೇರಿ ಅನಾಗರಿಕ ಬೆತ್ತಲೆ ಸೇವೆ ನಿಲ್ಲಿಸೋಣ!! ನವಸಮಾಜ ಕಟ್ಟೋಣ!!!

ಚಂದ್ರಗುತ್ತಿ ಜಾತ್ರೆ ನಿಷೇಧ: ವಿವಿಧ ಪ್ರತಿಕ್ರಿಯೆಗಳು

ಚಂದ್ರಗುತ್ತಿ ಜಾತ್ರೆ ನಿಷೇಧದ ಬಗ್ಗೆ ಪ್ರತಿಕ್ರಿಯಿಸುತ್ತ, ದಲಿತ ಸಂಘರ್ಷ ಸಮಿತಿಯ ಸ್ಥಾಪಕ ಮುಖಂಡ ಬಿ. ಕೃಷ್ಣಪ್ಪನವರು, "ನನ್ನ ಮೇಲೆ ತಪ್ಪಿನ ಆರೋಪ ಹೊರಿಸಿದರೂ ಬೇಸರವಿಲ್ಲ. ಆಯೋಗ ದ ಸಂ ಸ. ಮೇಲೆ ಆರೋಪ ಹೊರಿಸಿದೆ. ಅದಕ್ಕೆ ನಾವೇನೂ ಮಾಡೋಕಾಗೊಲ್ಲ. ನಮ್ಮ ನಿರ್ಧಾರದ ಹಿಂದಿದ್ದ ಮನುಷ್ಯತ್ವದ ಮನೋಭಾವನೆಯನ್ನು ಅವರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ.... ಒಟ್ಟಾರೆ, ಎಲ್ಲಾ ಗೊಂದಲಗಳ ನಡುವೆಯೂ ಇಂಥ ಒಂದು ಒಳ್ಳೆಯ ಕೆಲಸ (ಬೆತ್ತಲೆ ಸೇವೆ ನಿಷೇಧ) ಸಾಧ್ಯವಾಯಿತಲ್ಲ! ಇದು ದ ಸಂ.ಸ. ಜಯವಲ್ಲ, ಮನುಷ್ಯತ್ವಕ್ಕೆ ಗೌರವ ಕೊಡುವ ಎಲ್ಲಾ ಪ್ರಗತಿಪರರಿಗೆ ಸಿಕ್ಕಿದ ಜಯ. ಸರ್ಕಾರ ಈ ನಿಟ್ಟಿನಲ್ಲಿ ಅತ್ಯಂತ ದಿಟ್ಟವಾದ ಕ್ರಮ ಕೈಗೊಂಡು ಅದ್ಭುತ ಸಾಹಸ ತೋರಿದೆ" ಎಂದಿದ್ದಾರೆ.

ರೈತ ಸಂಘದ ಮುಖಂಡ ಎಚ್ ಎಸ್. ರುದ್ರಪ್ಪ, "....ಏನ್ ದೇಶಾರೀ ಇದು. ದೇವ್ರ ಹೆಸರು ಹೇಳ್ಕೊಂಡು ಹೆಂಗಸ್ರು, ಹುಡ್ಗೀರು, ಗಂಡಸ್ರು ಎಲ್ಲಾ ಬೆತ್ತಲೆ ಓಡೋ ಅನಾಗರಿಕ ಪದ್ಧತಿ ಇನ್ನೂ ಇದೆಯಲ್ಲ. ಯಾವ ದೇವರು ಹೇಳುತ್ತೆ ಬೆತ್ತಲೆ ಓಡೀ ಅಂತಾ?....ಇಂಥಾ ಜಾತ್ರೇನ ರದ್ದುಗೊಳಿಸಿದ್ದು ಅತ್ಯಂತ ಸೂಕ್ತವಾದದ್ದು. ಅದು ತಪ್ಪು ಅಂತ ಯಾವ ಪ್ರಜ್ಞಾವಂತ ಮನುಷ್ಯ ಹೇಳ್ತಾನೆ?....ಸರ್ಕಾರ ಈ ವರ್ಷ ಜಾತ್ರೆ ರದ್ದುಗೊಳಿಸದಿದ್ದರೆ, ನಾವು ರೈತರೆಲ್ಲ ಸಾವಿರಗಟ್ಟಲೆ ಸಂಖ್ಯೆಯಲ್ಲಿ ಚಂದ್ರಗುತ್ತಿಗೆ ಹೋಗ್ತಿದ್ದೆವು; ಈಗ ಪೋಲೀಸರು ಯಾವ ಕೆಲಸ ಮಾಡಿದ್ದಾರೋ ಅದನ್ನು ನಾವು ಮಾಡಲು ಪ್ರಯತ್ನಿಸುತ್ತಿದ್ದೆವು...." ಎಂದಿದ್ದಾರೆ.

ಆದರೆ ವಿದ್ಯಾರ್ಥಿ ಪರಿಷತ್ತಿನ ರಾಷ್ಟ್ರೀಯ ಮುಖಂಡ, ಶಿವಮೊಗ್ಗದ ಕಾಲೇಜು ಉಪನ್ಯಾಸಕ ಪಿ ವಿ. ಕೃಷ್ಣ ಭಟ್ ಮಾತ್ರ, "ಸರ್ಕಾರದ ಈ ಕ್ರಮ ಸಂಪೂರ್ಣ ತಪ್ಪು. ಯಾವುದೇ ಧಾರ್ಮಿಕ ಆಚರಣೆಯನ್ನು ಬಲವಂತವಾಗಿ ಪೋಲೀಸ್ ಶಕ್ತಿಯ ನೆರವಿನಿಂದ ತಡೆಯಕೂಡದು. ಜಾತ್ರೆಯನ್ನು ನಡೆಸಿ, ಇಷ್ಟೇ ಪೋಲೀಸ್ ಬಂದೋಬಸ್ತಿನ ಮೂಲಕ ಬೆತ್ತಲೆ ಸೇವೆಯನ್ನು ತಡೆಗಟ್ಟಬಹುದಿತ್ತು...." ಎಂದಿದ್ದಾರೆ.

1833ರಷ್ಟು ಹಿಂದೆಯೇ, ಆಗ ತೀರಾ ವ್ಯಾಪಕವಾಗಿದ್ದ 'ಸತಿ ಪದ್ಧತಿ'ಯಂಥ ಅಮಾನುಷವಾದ, 'ಧಾರ್ಮಿಕ' ಎನ್ನಿಸಿಕೊಂಡಿದ್ದ ಪದ್ಧತಿಯನ್ನು ಲಾರ್ಡ್ ವಿಲಿಯಂ ಬೆಂಟಿಂಕ್ ಉಗ್ರವಾದ ಕಾನೂನು ಕ್ರಮದ ಮೂಲಕ ಬಲವಂತವಾಗಿ ನಿಲ್ಲಿಸಿದನಲ್ಲ, ಆಗ ಕೂಡ ಈ ಧಾರ್ಮಿಕ ವ್ಯಕ್ತಿಗಳು ಆತನ ವಿರುದ್ಧ ಪ್ರಬಲ ಜನಾಭಿಪ್ರಾಯ ಮೂಡಿಸಿದ್ದರಲ್ಲ. ಹಾಗೇ ಇಂಥ ಕೆಲವು ಅನಾಗರಿಕವಾದ, ಆದರೆ ವ್ಯಾಪಕವಾದ, 'ಧಾರ್ಮಿಕ' ಎನಿಸಿಕೊಂಡ ಆಚರಣೆಗಳು ತಕ್ಕ ಕಟ್ಟುನಿಟ್ಟಿನ ಕಾನೂನಿಲ್ಲದೆ ಬರೀ ಮನವೊಲಿಕೆಯೊಂದರಿಂದಲೇ ನಿಲ್ಲುವುದಿಲ್ಲವಲ್ಲವೆ? ಎಂದರೆ ಅವರು ಒಪ್ಪಲು ತಯಾರಿಲ್ಲ.

ಆದರೆ ಹೀಗೆ ಜಾತ್ರೆಗೆ ಅವಕಾಶ ಕೊಟ್ಟು ಬರೀ ಬೆತ್ತಲೆ ಸೇವೆಯನ್ನು ಮಾತ್ರ ಪೋಲೀಸು ಬಲದಿಂದ ನಿಗ್ರಹಿಸಬೇಕಿತ್ತೆನ್ನುವ ವಾದಕ್ಕೆ ಹಿರಿಯ ಪೋಲೀಸ್ ಅಧಿಕಾರಿಯೊಬ್ಬರು ತಮ್ಮ ಅನುಭವದ ಆಳದಿಂದ ಹೇಳುವ ಮಾತು-"ಜಾತ್ರೆಗೆ ಲಕ್ಷಾಂತರ ಜನ ಸೇರಿದ ಮೇಲೆ 50 ಸಾವಿರ ಜನ ಪೋಲೀಸರನ್ನಿಟ್ಟಿದ್ದರೂ ಕೂಡ, ಕಿಡಿಗೇಡಿಗಳಾದರೂ ಬೆತ್ತಲೆ ಓಡಿ ಗಲಭೆಗೆ ನಾಂದಿ ಹಾಡಿ, ತಡೆಯಲು ಬಂದ ಪೋಲೀಸರ ಮೇಲೆಲ್ಲ ಹಲ್ಲೆ ಮಾಡಿ, ಕೊನೆಗೆ ಗೋಲೀಬಾರ್ ನಡೆಯುವುದು, ನೂರಾರು ಜನ ಸಾಯುವುದು-ಹೀಗೆಲ್ಲ ಆಗುವ ಸಾಧ್ಯತೆಯಿತ್ತು. ಜಾತ್ರೆಯನ್ನೇ ರದ್ದುಗೊಳಿಸುವುದು ಸರ್ಕಾರಕ್ಕಿದ್ದ ಏಕೈಕ ಮಾರ್ಗವಾಗಿತ್ತು."

ದೇವಸ್ಥಾನದ ಧರ್ಮದರ್ಶಿ ಸಮಿತಿಯ ಪ್ರಧಾನ ಸಂಚಾಲಕರಾದ ಈಡೂರು ಪರಶುರಾಮಪ್ಪನವರೂ ಸಹ, "ಈ ಬಾರಿ ಜಾತ್ರೆ

(4ನೇ ಪುಟಕ್ಕೆ)

'ಸುಧಾರಣೆ ಪ್ರಕ್ರಿಯೆಯನ್ನು ನಿಲ್ಲಿಸಬಯಸುವವರ ತಂತ್ರ'

....ಬೆತ್ತಲೆ ಸೇವೆ ಅಮಾನವೀಯವೂ ಅನಾಗರಿಕವೂ ಆದ ಒಂದು ಸಂಪ್ರದಾಯವಾಗಿದ್ದು ಸಮಾಜವನ್ನು ಮತ್ತೆ ಕಂದಾಚಾರದ ಕೂಪಕ್ಕೆ ತಳ್ಳುವ ಹೀನಾಯ ಪದ್ಧತಿಯಾಗಿರುವುದನ್ನು ಮನಗಂಡ ದಲಿತ ಸಂಘರ್ಷ ಸಮಿತಿಯಂತಹ ಸಂಘಟನೆಗಳು ಈ ವ್ಯವಹಾರವನ್ನು ತಡೆಯುವ ಕಾರ್ಯಕ್ಕೆ ಮುಂದಾದವು. ಬೆತ್ತಲೆ ಸೇವೆಯಲ್ಲಿ ಭಾಗವಹಿಸುವವರ ಪೈಕಿ ಹೆಚ್ಚಿನವರು ಕೆಳವರ್ಗದಿಂದ ಬಂದವರೆಂಬ ಸತ್ಯವನ್ನರಿತ ಈ ಸಂಘಟನೆಗಳು ನಡೆಸಿದ ಈ ಕಾರ್ಯಾಚರಣೆ ಸಾಮಾಜಿಕ ಕಳಕಳಿಯಿಂದ ಹುಟ್ಟಿಕೊಂಡದ್ದು. ಹೀನತೆಯ ರಾಡಿಯನ್ನೆಲ್ಲ ಮೈಗೆ ಮೆತ್ತಿಕೊಂಡ ಜನಸಮುದಾಯವೊಂದರ ಮೌಢ್ಯದ ಪೊರೆಯನ್ನು ಕಳಚುವ ಕಾರ್ಯಾಚರಣೆ ಅದು. ಅದನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕು. ಈ ಪ್ರಕ್ರಿಯೆಯಲ್ಲಿ ಸಣ್ಣಪುಟ್ಟ ತಪ್ಪು ಹೆಜ್ಜೆಗಳನ್ನು ದಸಂಸದಂತಹ ಸಂಘಟನೆಗಳು ಇರಿಸಿರಬಹುದು.

ಆದರೆ ಚಂದ್ರಗುತ್ತಿಯಲ್ಲಿ ನಡೆದ ಪೈಶಾಚಿಕ ಘಟನೆಗಳ ತಾಂಡವಕ್ಕೆ ಬೆತ್ತಲೆ ಸೇವೆ ತಡೆಯಲು ಹೊರಟ ದಸಂಸವಾಗಲಿ ವಿಚಾರ ವೇದಿಕೆಯಾಗಲಿ ಕಾರಣವೆಂದು ಹಣೆಪಟ್ಟಿ ಹಚ್ಚುವುದು ಮಾತ್ರ ಜನರ ಮೌಢ್ಯವನ್ನು ಮೋಜಿಗೆ ಬಳಸುವವರ ನೀತಿಯಾಗುತ್ತದೆ. ಸಮಾಜವನ್ನು ನೇರ್ಪುಗೊಳಿಸಬೇಕೆಂದು ಬಯಸುವವರ ಮೇಲೆ ಆಪಾದನೆ ಹೊರಿಸಿ ಬಲಿಪಶುಗಳನ್ನಾಗಿ ಮಾಡಿ ಸುಧಾರಣೆಯ ಪ್ರಕ್ರಿಯೆಯನ್ನು ನಿಲ್ಲಿಸಿ ಬಿಡುವ ತಂತ್ರವಾಗುತ್ತದೆ.

ದುಷ್ಕರ್ಮಿಗಳು ಹಿಂಸೆಯನ್ನು ಹೆಚ್ಚಿಸಿದರು, ಗಲಭೆಯನ್ನು ಬೆಳೆಸಿದರು ಎಂದು ಆಯೋಗವು ಹೇಳುತ್ತದೆ. ವರದಾ ನದಿಯಿಂದ ರೇಣುಕಾಂಬಾ ದೇವಾಲಯದವರೆಗಿನ ನಾಲ್ಕು ಕಿ. ಮೀ. ದಾರಿಯುದ್ದಕ್ಕೂ ಹಿಂಸೆ ನಡೆಯಲು ಇದೇ ಕಾರಣವೆಂಬ ಸತ್ಯ ವರದಿಯಲ್ಲಿ ಉಕ್ತವಾಗಿದೆ. ಈ ಶಕ್ತಿಗಳು ಹಾಗೂ ಸೂಕ್ತವ್ಯವಸ್ಥೆ ಮಾಡದ ಪೋಲೀಸ್ ಇಲಾಖೆ ಚಂದ್ರಗುತ್ತಿಯ ಕರ್ಮಕಾಂಡದ ಹೊಣೆಗಾರಿಕೆ ಹೊರಬೇಕು. **ಈ ಶಕ್ತಿಗಳು ಯಾವುವು, ಅವುಗಳ ಹಿಂದಿರುವ ಜನಗಳು ಯಾರು ಎಂದು ಗುರುತಿಸುವ ಗೋಜಿಗೆ ಆಯೋಗ ಹೋಗಿಲ್ಲ.** ಪೋಲೀಸ್ ಇಲಾಖೆಗೆ ವಿವರ ತಿಳಿದಿರಬಹುದು. ಆದರೆ ಅದನ್ನು ಬಹಿರಂಗ ಪಡಿಸುವ ಗೋಜಿಗೆ ಇಲಾಖೆಯೂ ಹೋಗಿಲ್ಲ. ಎಲ್ಲರೂ ಸೇರಿ ದಸಂಸದಂತಹ ಬಡಪಾಯಿ ಸಂಘಟನೆಯೊಂದರ ಮೇಲೆ ಗೂಬೆ ಕೂರಿಸಲು ಹೊರಟಂತಿದೆ.

('ಮುಂಗಾರು' 4-3-87ರ ಸಂಪಾದಕೀಯದಿಂದ)

ಬೆತ್ತಲೆಸೇವೆಮತ್ತುಅದರನಿಷೇಧ: ವಿವೇಚನೆ

(2ನೇ ಪುಟದಿಂದ)

ಇನ್ನು, ಹೊಳೆಯಿಂದ ದೇವಸ್ಥಾನದವರೆಗಿನ ನಾಲ್ಕೈದು ಕಿ.ಮೀ. ದಾರಿಯುದ್ದಕ್ಕೂ ಗಲಭೆ ಮತ್ತು ಬೆತ್ತಲೆಗೊಳಿಸುವಿಕೆ ಏಕ ಕಾಲದಲ್ಲಿ ಆರಂಭವಾಗಿರುವಾಗ, ಅದಕ್ಕೆಂದೇ ಎಂಬಂತೆ ಜೋಗ-ಜೋಗತಿಯರು, ಪುಂಡರು ಕುಡಿದು 'ಸಿದ್ಧರಾಗಿ' ಬಂದಿದ್ದಾಗ, "ಗಲಭೆ ಪೂರ್ವಯೋಜಿತವಲ್ಲ" ಎಂದು ಆಯೋಗ ಅದು ಹೇಗೆ ನಿರ್ಧಾರಕ್ಕೆ ಬಂದಿತೆಂಬುದು ನನಗೆ ಅರ್ಥವಾಗುವುದಿಲ್ಲ.

ಅದೇ ಇನ್ನೊಂದು ದಿಕ್ಕಿನಲ್ಲಿ, ಗಲಭೆ ಆರಂಭವಾಗುವುದಕ್ಕೆ ಸ್ವಲ್ಪವೇ ಮುನ್ನ ಒಬ್ಬ ಯುವಕ ಉನ್ಮತ್ತನಾಗಿ, ಜೀಪಿನಲ್ಲಿ ಮೈಕ್ ಹಿಡಿದು ನಿಂತು, "ಯಾರು ಬೇಕಾದರೂ ಬೆತ್ತಲೆ ಸೇವೆ ಮಾಡಿ. ಯಾರೂ ತಡೆಯುವಂತಿಲ್ಲ. ಪೋಲೀಸರೂ ಕ್ರಮ ತೆಗೆದುಕೊಳ್ಳುವುದಿಲ್ಲ...." ಎಂದು ಪ್ರಚಾರ ಮಾಡುತ್ತಾ ಎಲ್ಲ ಕಡೆ ಸುತ್ತಿದ್ದಾನೆ. ಇನ್ನು ಹಲವು ಜನ ಪ್ರಮುಖವಾಗಿ 'ದಲಿತ ಸಂಘದ ಬಿ. ಕೃಷ್ಣಪ್ಪ ಎಲ್ಲಿ?' ಎನ್ನುತ್ತಾ ಎಲ್ಲಾ ವಾಹನಗಳನ್ನೂ ತಪಾಸಣೆ ಮಾಡಿದ್ದಾರೆ; ಹಾಗೂ ಬೆತ್ತಲೆ ಸೇವೆ ವಿರೋಧಿಸುತ್ತಿದ್ದ ಪತ್ರಕರ್ತರನ್ನೂ ಸ್ವಯಂಸೇವಕರನ್ನೂ ಹುಡುಕಿ ಹುಡುಕಿ ಹಲ್ಲೆಕೋರರಿಗೆ ತೋರಿಸಿ ಕೊಟ್ಟಿದ್ದಾರೆ. ಇವರೆಲ್ಲ ಸಾಗರ, ಸೊರಬ ಮತ್ತು ಶಿವಮೊಗ್ಗದ ಆರೆಸ್ಸೆಸ್, ವಿಶ್ವ ಹಿಂದು ಪರಿಷತ್, ಅ. ಭಾ. ವಿದ್ಯಾರ್ಥಿ ಪರಿಷತ್‌ಗಳ ಪರಿಚಿತ ವ್ಯಕ್ತಿಗಳೇ ಆಗಿದ್ದರು ಎಂದು ಆ ಭಾಗಗಳಿಂದ ಅಲ್ಲಿಗೆ ಹೋಗಿದ್ದ ಬೆತ್ತಲೆ ವಿರೋಧಿ ಕಾರ್ಯಕರ್ತರುಗಳು ಪತ್ರಿಕೆಗಳಲ್ಲಿ ಪ್ರತ್ಯಕ್ಷ ಹೇಳಿಕೆಗಳನ್ನು ಕೊಟ್ಟಿದ್ದಾರೆ.

ಇದೆಲ್ಲದಕ್ಕೆ ಕಳಶವಿಟ್ಟಂತೆ, ಅ.ಭಾ.ವಿ.ಪ.ದ ಪಿ.ವಿ ಕೃಷ್ಣ ಭಟ್ ತಮ್ಮ ಮಗುವನ್ನು ಬೆತ್ತಲೆ ಮಾಡಿ ಹೆಗಲ ಮೇಲೆ ಹೊತ್ತುಕೊಂಡು ಹೊಳೆಯಿಂದ ದೇವಸ್ಥಾನಕ್ಕೆ ಹೋಗಿದ್ದಾರೆಂದೂ ವರದಿಗಳು ಹೇಳಿವೆ.

ಇವೆಲ್ಲ ಚನ್ನವೀರಪ್ಪ ಆಯೋಗದೆದುರು ಸಾಬೀತಾಗಲು ಸಾಕಷ್ಟು ಪುರಾವೆ ಸಹಿತ ದಾಖಲಾಗಿಲ್ಲದಿರಬಹುದು. ಆದರೆ ಸುಳ್ಳಂತೂ ಅಲ್ಲ. ಅಂದರೆ, ಒಂದೇ ಮರದ ಬೇರೆ ಬೇರೆ ಶಾಖೆಗಳಾಗಿರುವ ಈ ಮೇಲ್ಕಂಡ ಸಂಘಟನೆಗಳು ಅಧಿಕೃತವಾಗಿ ಬೆತ್ತಲೆ ವಿರೋಧಿ ನಿಲುವು ಘೋಷಿಸಿಕೊಂಡು, ಕರಪತ್ರ ಹಂಚಿಕೆ ಇತ್ಯಾದಿ ಮಾಡಿರಬಹುದು. ಆದರೆ ಅವರ ಸದಸ್ಯರು, ಬೆಂಬಲಿಗರು ಮತ್ತು ಅಭಿಮಾನಿಗಳಲ್ಲೇ ಅತಿ ಹೆಚ್ಚಿನವರು ಬೆತ್ತಲೆ ಸೇವೆಯನ್ನು ನಿಜವಾಗಿ ವಿರೋಧಿಸಲಿಲ್ಲ, ಅಷ್ಟೇ ಅಲ್ಲ, ಸಕ್ರಿಯವಾಗಿ ಬೆಂಬಲಿಸಿದರು ಎಂಬುದು ಮಾತ್ರ ನಿಜ. ಇದು ಬಹಳಷ್ಟು ಪತ್ರಿಕಾ ವರದಿಗಳಲ್ಲಿ ದಾಖಲಾಗಿದೆ.

(ಅದಕ್ಕೆ ಕೇವಲ 1 ವರ್ಷ ಮೊದಲು ವಿ.ಹಿಂ.ಪ. ಸವದತ್ತಿಯ 'ದೇವದಾಸಿ' ಜಾತ್ರೆಯಲ್ಲಿ ಭಕ್ತಾದಿಗಳಿಗೆ ಪಾನಕವನ್ನೋ ಗಂಜಿಯನ್ನೋ ಹಂಚಿದ್ದನ್ನು ಸ್ಮರಿಸಬೇಕು)

ಇನ್ನು, ಈ ವರ್ಷ ಜಾತ್ರೆಯನ್ನು ನಿಷೇಧಿಸಿ ಪೋಲೀಸ್ ಬಂದೋಬಸ್ತ್ ಏರ್ಪಡಿಸಿದಾಗ, "6 ವರ್ಷದ ಹೆಣ್ಣು ಮಗುವೊಂದು ದೇವಸ್ಥಾನದ ಕೊಳದಲ್ಲಿ ಸ್ನಾನ ಮಾಡಿ ಬೆತ್ತಲೆ ಸೇವೆಯನ್ನು ಯಶಸ್ವಿಯಾಗಿ ನೆರವೇರಿಸಿತು" ಎಂಬ ಸುಳ್ಳು ಸುದ್ದಿಯನ್ನು ಪತ್ರಿಕೆಗಳಿಗೆ ನೀಡಿ ಈ ಹೀನ ನಡವಳಿಕೆಯನ್ನು ನಿರ್ಲಜ್ಜವಾಗಿ ಸಮರ್ಥಿಸಿಕೊಂಡಂಥ, ಹಾಗೂ "ಜಾತ್ರೆ ನಿಷೇಧವನ್ನು ವಿರೋಧಿಸಿ ದೇವಸ್ಥಾನದ ಧರ್ಮದರ್ಶಿಗಳೆಲ್ಲ ಸಾಮೂಹಿಕವಾಗಿ ರಾಜೀನಾಮೆ ಕೊಟ್ಟಿದ್ದಾರೆ" ಎಂಬ ಮತ್ತೊಂದು ಸುಳ್ಳು ಸುದ್ದಿಯನ್ನೂ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವಂತೆ ಮಾಡಿದಂಥ ಸ್ವಾದಿ ಎಂಬ ಧರ್ಮದರ್ಶಿ ಆರೆಸ್ಸೆಸ್-ವಿಹಿಂಪಗಳ ಬೆಂಬಲಿಗನಲ್ಲವೆ?

ಕಳೆದ ವರ್ಷ ಧಾಂಧಲೆ ನಡೆಸಿದವರಿಗೆ ಇವನಿಂದ, ಇವನ ಗುಂಪಿನವರಿಂದ ಹಾಗೂ ಇವನಂಥವರಿಂದ ಸಿಕ್ಕ ಕುಮ್ಮಕ್ಕು ಎಂಥದೆಂಬುದು ಆಯೋಗದ ಪರಿಶೀಲನೆಗೆ ಒಳಪಟ್ಟಿಲ್ಲ.

ಅಂದರೆ, ಒಂದು ಸಂಘಟನೆ ಅಧಿಕೃತವಾಗಿ ಬೇರೆ ನಿಲುವು ಘೋಷಿಸಿರಬಹುದು ಅಥವಾ ಅಧಿಕೃತವಾಗಿ ದೊಂಬಿ, ಹಲ್ಲೆ ಇತ್ಯಾದಿಗಳಲ್ಲಿ ಪಾಲ್ಗೊಂಡಿಲ್ಲದಿರಬಹುದು. ಆದರೆ ಅದರ ಸದಸ್ಯರಾಗಿರುವವರು, ಬೆಂಬಲಿಗರು, ಅಭಿಮಾನಿಗಳು ಸಾಕಷ್ಟು ಸಂಖ್ಯೆಯಲ್ಲಿ ಅಂಥದರಲ್ಲಿ ಪಾಲ್ಗೊಂಡಿದ್ದಾರೆಂದರೆ ಆ ಸಂಘಟನೆಯ ಪಾತ್ರವೇ ವಿಮರ್ಶೆಗೆ ಒಳಪಡಬೇಕಾಗುತ್ತದೆ. ದೇಶದ ಹಲವು ಕಡೆಗಳ ಗಲಭೆಗಳ ಬಗೆಗೂ ಈ ಮಾತು ಅನ್ವಯಿಸುತ್ತದೆ ಅದನ್ನು ಅಲ್ಲಗಳೆಯುವ **ಆತ್ಮ ವಂಚನೆಗಿಂತ,** ದೇಶದ ಬಗ್ಗೆ, ದೇಶದ ಬಹು ಸಂಖ್ಯಾತ ಜನ ಅವಿಚಾರದ ಆಚರಣೆಗಳಲ್ಲಿ ಮುಳುಗಿರುವ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ, ಈ ಮೇಲ್ಕಂಡ ಅಂಶಗಳ ಬಗ್ಗೆ **ತೀವ್ರವಾದ ಆತ್ಮ ವಿಮರ್ಶೆ** ಮಾಡಿಕೊಳ್ಳುವುದು ಅಗತ್ಯ.

—ಸಿರಿಮನೆ ನಾಗರಾಜ್

ಚಂದ್ರಗುತ್ತಿ ಜಾತ್ರೆ ನಿಷೇಧ: ವಿವಿಧ ಪ್ರತಿಕ್ರಿಯೆಗಳು

(...ೀ ಪುಟದಿಂದ)

...ದ್ದರೆ ಗಲಾಟೆ ನಡೆದೇ ನಡೆಯುತ್ತಿ... ಮುಂದಿನ ಮೂರ್ನಾಲ್ಕು ವರ್ಷಕಾಲ ...ತ್ರೆಯನ್ನು ರದ್ದು ಪಡಿಸಿದರೂ ತಪ್ಪಾಗ...ರದು" ಎಂದಿದ್ದಾರೆ ಅಷ್ಟೇ ಅಲ್ಲ, ...ರ್ಕಾರದ ಕ್ರಮ ವಿರೋಧಿಸಿ ಧರ್ಮದರ್ಶಿ ...ಂಡಳಿಯವರೆಲ್ಲ ರಾಜೀನಾಮೆ ನೀಡಿದ್ದಾ...ಬ ಇನ್ನೊಬ್ಬ ಧರ್ಮದರ್ಶಿ ಸ್ವಾದಿಯ ...ೕಳಿಕೆ ಅಪ್ಪಟ ಸುಳ್ಳು ಎಂದೂ ಸ್ಪಷ್ಟೀ...ರಿಸಿದ್ದಾರೆ.

ಬೆತ್ತಲೆ ಸೇವೆ ತಡೆಯಲು ಬರುವವರ ...ಮೇಲೆ ಹಲ್ಲೆ ನಡೆಸಲು ಚಂದ್ರಗುತ್ತಿ ಪ್ರದೇ...ಶದಲ್ಲಿ ಒಂದು ಗುಂಪು ತಯಾರಿ ನಡೆಸಿತ್ತು; ...ಹಾಗೂ "ಬೆತ್ತಲೆ ಸೇವೆ ವಿರೋಧಿಸಲು, ತಡೆಯಲು ಯಾರಿಗೂ ಹಕ್ಕಿಲ್ಲ. ಭಕ್ತರೆಲ್ಲಾ ತಂಡೋಪತಂಡವಾಗಿ ಚಂದ್ರಗುತ್ತಿಯತ್ತ ...ಸಾಗಿ ಬನ್ನಿ" ಎಂಬ ಘೋಷಣೆಗಳ ಕರಪತ್ರ...ಗಳನ್ನು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಂಚಲಾಗಿತ್ತು ಎಂದು ವರದಿಯಾಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ, "ಸರ್ಕಾರದ ನಿರ್ಧಾರ ಸರಿಯಾದುದಲ್ಲ, ಇದು ಮುಗ್ಧ ಜನರ ಧಾರ್ಮಿಕ ಸ್ವಾತಂತ್ರ್ಯದಲ್ಲಿ ನಡೆಸಿದ ಹಸ್ತಕ್ಷೇಪ...." ಇತ್ಯಾದಿಯಾಗಿ ಬೊಬ್ಬೆ ಹೊಡೆಯುವವರ ಮನುಷ್ಯತ್ವದ ಬಗ್ಗೆ ಏನೆನ್ನೋಣ ?

ಹೀಗೆ ಪೋಲೀಸ್ ಬಲ ಉಪಯೋಗಿಸಿ ಜಾತ್ರೆಯನ್ನೇ ನಿಷೇಧಿಸಿದ್ದು ಸರಿಯಲ್ಲ ಎಂದು ವಾದಿಸುವವರೇ, "ಯಾವುದೇ ಮೂಢನಂಬಿಕೆಯನ್ನು ಬಲವಂತದಿಂದ ಹೋಗಲಾಡಿಸಲು ಆಗುವುದಿಲ್ಲ ಮನವರಿಕೆಯಿಂದ, ಕ್ರಮೇಣ ದೂರಮಾಡಬೇಕು" ಎಂದೂ ವಾದಿಸುತ್ತಾರೆ. ಆದರೆ ಎಷ್ಟೇ ಒಳ್ಳೆಯ ಮನವರಿಕೆಯಿರಲಿ, ಬರೀ ಅಷ್ಟರಿಂದಲೇ ಜನ ಇಂಥ ಆಚರಣೆಗಳನ್ನು ಬಿಡುವುದಿಲ್ಲವೆಂಬುದಕ್ಕೆ ಈ ಚಂದ್ರಗುತ್ತಿ, ಸವದತ್ತಿಯಂಥವೇ ಸಾಕ್ಷಿ.

ಚಂದ್ರಗುತ್ತಿ ದೇವಸ್ಥಾನ ಸಮಿತಿ ಬೆತ್ತಲೆ ಸೇವೆಯನ್ನು ಇಪ್ಪತ್ತು ವರ್ಷಗಳ ಹಿಂದೆಯೇ ಸೇವೆಗಳ ಪಟ್ಟಿಯಿಂದ ಕೈಬಿಟ್ಟು, ಬಟ್ಟೆ ಹಾಕಿಕೊಂಡೇ ಸೇವೆ ಮಾಡುವಂತೆ ಭಕ್ತರಿಗೆ ಹೇಳುತ್ತ ಬಂದಿದೆ ಈಗಲೂ ದೇವಸ್ಥಾನದ ಒಳಕ್ಕೆ ಪುನಃ ಬಟ್ಟೆ ಹಾಕಿಕೊಂಡೇ ಹೋಗಲು ಬಿಡುವುದು. (ಹಾಗೆಂದು ಧರ್ಮದರ್ಶಿಯೊಬ್ಬರು ಹೇಳಿದ್ದು ಪ್ರಕಟವಾಗಿದೆ.) ಸವದತ್ತಿಯಲ್ಲಿ ದೇವದಾಸಿ ಪದ್ಧತಿ ಮತ್ತು ಬೆತ್ತಲೆ ಸೇವೆ ಕೈಬಿಡುವಂತೆ ಜನತೆಯ ಮನವೊಲಿಸುವ ಪ್ರಯತ್ನ ಎಷ್ಟೋ ವರ್ಷಗಳಿಂದ ನಡೆದಿದ್ದರೂ ಆ ಅನಿಷ್ಟ ಪದ್ಧತಿ ಇನ್ನೂ ಒಂದಂಶವೂ ಕಡಿಮೆಯಾಗಿಲ್ಲ

ಅದಕ್ಕೇ ಬಿ. ಕೃಷ್ಣಪ್ಪ ಹೇಳುತ್ತಾರೆ– "ನಮ್ಮ ಮಗು ಕಾಯಿಲೆಯಿಂದ ನರಳುತ್ತಿದ್ದರೂ ಔಷಧ ಕುಡಿಯಲು ಒಪ್ಪುವುದಿಲ್ಲ. ಅದು ಕುಡಿಯಲೇಬೇಕೆಂದು ನಮಗೇ ಗೊತ್ತು. ಕುಡಿದರೆ ಅದರ ನೋವು, ಬೇನೆ ನಿಲ್ಲುತ್ತೆ ಎಂದು ಅದಕ್ಕೂ ಗೊತ್ತು. ಆದರೆ ಎಷ್ಟೇ ರಮಿಸಿದರೂ ಕೇಳುವುದಿಲ್ಲ. ಆಗ ಮೂಗು ಹಿಡಿದು ಬಾಯಿ ಕಳಿಸಿ, ಎಷ್ಟೇ ಕಹಿಯಾಗಿದ್ದರೂ ಬಿಡದೆ ಔಷಧ ಕುಡಿಸುತ್ತೇವೆ. ಹಾಗೆ ಇದೂ ಕೂಡ."

(ಆಧಾರ: ಪ್ರಜಾವಾಣಿ, ಮುಂಗಾರು, ಸುದ್ದಿ ಸಂಗಾತಿ ಪತ್ರಿಕಾ ವರದಿಗಳು.)

ಜಯಪುರದ ಗಲ್ಲಿ

ಜಯಪುರದ ಬಸ್ ಸ್ಟಾಂಡ್
ಎದುರ ಗಲ್ಲಿ
ಚರಂಡಿ ಮೇಲೆ ಚಪ್ಪಡಿ
ಹಾಸಿಲ್ಲ ಅಲ್ಲಿ
ಇಲಾಖೆ ಚಪ್ಪಡಿ ಹಾಸಿ
ಪಾವ್ತಿಸಲಿ ಬಿಲ್ಲು
ಆಗ ಬಸ್ಸು ಹತ್ತುವವರು ಬಿದ್ದರೂ
ಮುರಿಯದು ಹಲ್ಲು

—ಎಂ. ವಿ. ಗಂಗಾಧರ್

ಲೋ॥ ಇಲಾಖೆ ಹಂಗಾಮಿ ಕೆಲಸಗಾರರ 'ಜೈಲ್‌ಭರೋ'

ಕೊಪ್ಪ: ಸಮಾನ ಕೆಲಸಕ್ಕೆ ಸಮಾನ ವೇತನ ಹೆಚ್ಚಳ, ತುಟ್ಟಿಭತ್ಯೆ ನೀಡಿಕೆ, ನಿವೃತ್ತಿ ವೇತನ–ಇತ್ಯಾದಿ ಬೇಡಿಕೆಗಳನ್ನು ಈಡೇರಿಸದಿರುವ ರಾಜ್ಯ ಸರ್ಕಾರದ ಕ್ರಮವನ್ನು ವಿರೋಧಿಸಿ ಏ. 2ರಿಂದ ಅನಿರ್ದಿಷ್ಟಾವಧಿ ಚಳುವಳಿ ಹೂಡಲು ಲೋಕೋಪಯೋಗಿ ಕೆಲಸಗಾರರ ಸಂಘ ನಿರ್ಧರಿಸಿದೆ.

1984ರಿಂದಲೂ ಕೇವಲ 300 ರೂ. ಸಂಬಳದಲ್ಲಿ ದುಡಿಯುತ್ತಿರುವ ಈ ಕಾರ್ಮಿಕರಿಗೆ ಸೌಲಭ್ಯಗಳನ್ನು ಹೆಚ್ಚಿಸದಿರುವ ಸರಕಾರದ ನೀತಿಯನ್ನು ಮಾ. 20ರಂದು ನಡೆದ ಸಭೆಯಲ್ಲಿ ಖಂಡಿಸಿ, ಏಪ್ರಿಲ್ 2ರಿಂದ ಚಿಕ್ಕಮಗಳೂರಿನಲ್ಲಿ 'ಜೈಲ್ ಭರೋ' ಚಳುವಳಿ ಹೂಡಲು ನಿರ್ಧರಿಸಲಾಯಿತು ಎಂದು ಸಂಘದ ಕಾರ್ಯದರ್ಶಿ ಎನ್. ಆರ್. ರಾಮಚಂದ್ರ ತಿಳಿಸಿದ್ದಾರೆ

ಕೊಪ್ಪ ತಾ॥ ಶಾಲಾಭಿವೃದ್ಧಿ ಸಮಿತಿಗಳ, ಶಿಕ್ಷಕರ ಸಮ್ಮೇಳನ

ಕೊಪ್ಪ: ಈ ತಾಲ್ಲೂಕಿನ ಶಾಲಾಭಿವೃದ್ಧಿ ಸಮಿತಿಗಳ ಮತ್ತು ಶಿಕ್ಷಕರ ಸಮ್ಮೇಳನ ಆಂದಗಾರಿನಲ್ಲಿ ಮಾ. 23 ರಂದು ನಡೆಯಿತು. ಪಿ.ಜಿ. ಗುರ್ಜರ್ ಅವರ ಅಧ್ಯಕ್ಷತೆಯಲ್ಲಿ ಡಿಡಿಪಿಐ ಎಚ್. ಎ. ರಾಮಸ್ವಾಮಿ ಅಯ್ಯಂಗಾರ್ ಸಮ್ಮೇಳನವನ್ನೂ ಎ. ರಮೇಶರಾವ್ ವಸ್ತು ಪ್ರದರ್ಶನವನ್ನೂ ಉದ್ಘಾಟಿಸಿದರು. ಸಿ.ಎಸ್. ರಾಮಸ್ವಾಮಿ ಮತ್ತು ಎಸ್. ಸಿ. ರಾಜಣ್ಣ ಮುಖ್ಯ ಅತಿಥಿಗಳಾಗಿದ್ದರು

ಪಿ.ಜಿ. ಗುರ್ಜರ್ ಅವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ನಡೆದ ಮುಕ್ತಾಯ ಸಮಾರಂಭದಲ್ಲಿ ಶಿರೀಶ್ ಗುರ್ಜರ್ ಪ್ರಶಸ್ತಿಪತ್ರ ವಿತರಿಸಿದರು. ಉದ್ಯಾವರ ಮಾಧವಾಚಾರ್ಯ ಮುಖ್ಯಅತಿಥಿಗಳಾಗಿದ್ದರು.

ಕುಸ್ತಿ: ಓಂಕಾರ್‌ಗೆ ಬೆಳ್ಳಿ ಗದೆ

ಬೀರೂರು: ಇಲ್ಲಿನ ಖ್ಯಾತ ಕುಸ್ತಿ ಪಟು ಓಂಕಾರ್ ಅವರು ವೀರಭದ್ರಸ್ವಾಮಿ ರಥೋತ್ಸವದ ಅಂಗವಾಗಿ ಶಿವಾಜಿ ವ್ಯಾಯಾಮ ಶಾಲೆ ಆಶ್ರಯದಲ್ಲಿ ಈಚೆಗೆ ನಡೆದ ಬಯಲು ಕುಸ್ತಿ ಸ್ಪರ್ಧೆಯಲ್ಲಿ ಪುಣೆಯ ಲಾಲ್ ಸಾಬ್ ಅವರನ್ನು ಸೋಲಿಸಿ ಬೆಳ್ಳಿಗದೆ ಗೆದ್ದುಕೊಂಡರು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀನಬಟಿಗೆ ಅಚ್ಚು ಕೂಟ, ಕೊಪ್ಪ.